ಕೂಗುತ್ತಾ ಬರೋದಿಲ್ಲ. ಅದು ಸಾಮಾನ್ಯವಾಗಿ ನಡು ಮಧ್ಯಾಹ್ನದ ಮಳೆಯ ಸುವಾಸನೆಯಲ್ಲಿ ಅಥವಾ ಬಳೆಗಳ ಮೃದುವಾದ ಕಿಂಕಿಣಿ ಸ್ವರದಲ್ಲಿ ಸುಮ್ಮನೆ ನಡೆದುಕೊಂಡು ಬರುತ್ತದೆ. ಕೆಲವೊಮ್ಮೆ ಒಂದು ಪದ, ಬೀದಿಯಲ್ಲಿ ಕೇಳಿ ಬರುವ ಸಂಭಾಷಣೆಯ ತುಣುಕು ಅಥವಾ ಯಾವುದೋ ಜಾನಪದ ಹಾಡಿನ ಲಯ, ಧಾಟಿ ನನ್ನ ಮನಸ್ಸಿನಲ್ಲಿ ಕುಡಿಯೊಡೆಯಲು ಕಾಯುತ್ತಿರುವ ಅಪೂರ್ಣ ಕಥೆಯಂತೆ ಉಳಿದು ಬಿಡುತ್ತದೆ. ನನ್ನ ಬರವಣಿಗೆಯ ಪ್ರಕ್ರಿಯೆಯು ಸುಮ್ಮನೆ ಗಮನಿಸುವುದು ಮತ್ತು ನಿಶ್ಚಲವಾದುದರ ಜೊತೆಗೆ ಶುರುವಾಗುತ್ತದೆ. ನನ್ನಲ್ಲಿ ಮೂಡಿದ ಯಾವುದೇ ಕಲ್ಪನೆಯ ಬೆನ್ನಟ್ಟಿ ಹೋಗೋದಿಲ್ಲ ನಾನು. ಅದು ತಾನಾಗೇ ನನ್ನೊಳಗಿಳಿದು ರೂಪ ಪಡೆಯೋದಕ್ಕೆ ಬಿಟ್ಟು ಬಿಡುತ್ತೇನೆ. ಕೇಳಿಸಿಕೊಳ್ಳುತ್ತೇನೆ, ಆಗಾಗ್ಗೆ ಚೂರುಚೂರು, ಕಾಗದದ ತುಣುಕುಗಳ ಮೇಲೆ, ಪುಸ್ತಕಗಳ ಅಂಚುಗಳ ಮೇಲೆ, ಕಿರಾಣಿ ಲೆಕ್ಕದ ಚೀಟಿಗಳ ಹಿಂಭಾಗದಲ್ಲೂ ಹೊಳೆದ ಸಾಲುಗಳನ್ನು ಬರೆದಿಡುತ್ತೇನೆ. ಹೀಗೆ ಬರೆದದ್ದೆಲ್ಲ ಸಂಪೂರ್ಣ ಕವಿತೆಗಳಲ್ಲ ಬದಲಿಗೆ ಕಾವ್ಯದ ಬೀಜಗಳು. ಕೆಲವೊಮ್ಮೆ ಒಂದು ಪವಿತ್ರ ಆಚರಣೆಯಂತೆ ನಾನು ಬರವಣಿಗೆ ಶುರು ಮಾಡಿದ್ದೂ ಇದೆ. ಚಹಾ ಮಾಡಿಕೊಂಡು, ಗಾಳಿ ಬರಲು ಕಿಟಕಿಗಳನ್ನು ತೆಗೆದು, ನನ್ನ ಹಳೆಯ ದಿನಚರಿ ಪುಸ್ತಕವನ್ನು ತೆರೆದು ಕೂತಾಗ ನಿಧಾನವಾಗಿ ಬರೆಯುತ್ತೇನೆ. ಇನ್ನು ಕೆಲವೊಮ್ಮೆ ಕವಿತೆಗಳು ಯಾವುದೇ ಮುನ್ಸೂಚನೆ ಇಲ್ಲದೆ ಹೊರ ಹೊರ ಹೊಮ್ಮುತ್ತವೆ. ಚಲಿಸುತ್ತಿರುವ ಬಸ್ಸಿನಲ್ಲಿ, ನಿದ್ದೆ ಬಾರದ ರಾತ್ರಿಗಳಲ್ಲಿ, ಅಪರಿಚಿತ ಹಳ್ಳಿಯ ಪಕ್ಕದಲ್ಲಿ ಹರಿಯುವ ನದಿಯನ್ನು ನೋಡುತ್ತಿರುವಾಗ ತನ್ನಿಂದ ತಾನೇ ಕಾವ್ಯ ಸೃಷ್ಟಿಯಾಗುತ್ತದೆ. ಹೀಗಾಗಿ, ಕಾವ್ಯ ನನ್ನ ಪಾಲಿಗೆ ಒಂದು ಪವಿತ್ರ ಆಚರಣೆ ಮತ್ತು ಬಂಡಾಯ ಎರಡೂ ಆಗಿದೆ. ಕೆಲವೊಮ್ಮೆ ಕವಿತೆ ಅಪಾರ ತಾಳ್ಮೆಯನ್ನ ಬೇಡಿದರೆ ಕೆಲವೊಮ್ಮೆ ಜರೂರತ್ತನ್ನ ಬಯಸುತ್ತದೆ. ತಿದ್ದುವ ಹಂತದಲ್ಲಿ ನಾನು ಅದಕ್ಕೆ ಎಚ್ಚರಿಕೆಯಿಂದ ಮರು ರೂಪ ಕೊಡುತ್ತೇನೆ. ಅದರ ಆಂತರಿಕ ಲಯವನ್ನು ಅನುಭವಿಸಲು ಜೋರಾಗಿ ಓದುತ್ತೇನೆ. ಆದರೆ ಕವಿತೆಯ ಹೃದಯ ಯಾವಾಗಲೂ ಬದುಕು ಮತ್ತು ಭಾಷೆ ಒಟ್ಟಿಗೆ ಡಿಕ್ಕಿ ಹೊಡೆಯುವ ಆ ಮೊದಲ ಹಸಿ ಹಸಿ ಕ್ಷಣಕ್ಕೆ ಸೇರಿದ್ದು.ನಿಜ ಹೇಳಬೇಕೆಂದರೆ,ಕವಿತೆ ನಾನು ಈ ಜಗತ್ತಿನಲ್ಲಿ ಉಸಿರಾಡುವ ರೀತಿ ನೀತಿ ಶಿಸ್ತಿಗಿಂತಲೂ ಶರಣಾಗತಿಗೆ ಸಂಬಂಧಿಸಿದ್ದು. ಅದು ಸಂಪೂರ್ಣ ಶರಣಾಗತಿ!

◆ **ನೀವು ಹೇಳಿದ್ದು ಆಸಕ್ತಿಕರವಾಗಿದೆ. ಇದನ್ನೇ ಮುಂದುವರಿಸಿ ಮಾತಾಡುವುದಾದರೆ, ಸಾಮಾನ್ಯವಾಗಿ ನಿಮಗೆ ಕವಿತೆ ಬರೆಯಲು ಹುರಿದುಂಬಿಸುವ ಸಂಗತಿಗಳು ಯಾವುವು? ನಿಸರ್ಗ, ನೆನಪು, ರಾಜಕಾರಣ, ದಿನನಿತ್ಯದ ಬದುಕು ಯಾವುದದು...?**

ಒಂದು ಗುಬ್ಬಚ್ಚಿಯ ಸಾವು, ಒಂದು ಎಲೆಯ ಉದುರುವಿಕೆ, ಯುದ್ಧಪೀಡಿತ ಮಕ್ಕಳ ಆಕ್ರಂದನ, ಅಡುಗೆ ಮನೆಯಲ್ಲಿರುವ ತಟ್ಟೆಲೋಟಗಳ ಸ್ಪಂದನ ಇವೆಲ್ಲದರಲ್ಲೂ ಕವಿತೆ ಇದೆ. ಮೋಡಗಳ ಘರ್ಜನೆಯಲ್ಲಿ, ಮನುಷ್ಯರ ನೋವಿನಲ್ಲಿ ಕವಿತೆ ಹುಟ್ಟಿಕೊಳ್ಳುತ್ತದೆ. ಅಕಾಲಿಕ ವಿಧವೆಯ ಅಳಿಸಿದ ಕುಂಕುಮದಲ್ಲಿ ಕವಿತೆಯ ಹೆಸರು ಬರೆದಿದೆ... ಅತ್ಯಾಚಾರಕ್ಕೆ ಒಳಗಾದ ಹೆಣ್ಣಿನ ವೇದನೆಯ ಕಿರುಚಾಟದಲ್ಲಿ ಕಾವ್ಯಧರ್ಮ ಅಡಗಿದೆ. ನಿಜವಾಗಿಯೂ, ಪ್ರತಿಯೊಂದು ಭಾವೋದ್ರೇಕದ ಕ್ಷಣದಲ್ಲೂ ಕವಿತೆ ಬರೆಯಲ್ಪಡುತ್ತದೆ... ಅದರಲ್ಲಿ ಯಾವುದೋ ಒಂದನ್ನು ಎತ್ತಿ ಹೇಳುವುದು ಸಾಧ್ಯವಿಲ್ಲ!

◆ **ಸಮಕಾಲೀನ ಬಾಂಗ್ಲಾ ಕಾವ್ಯದ ಕುರಿತು ನಿಮ್ಮ ಅಭಿಪ್ರಾಯವೇನು?**

ಬಂಗಾಳಿ ಕಾವ್ಯವು ಒಂದು ಗಟ್ಟಿಯಾದ ಅಡಿಪಾಯದ ಮೇಲೆ ನಿಂತಿದೆ. ಇದು ಎಂಬತ್ತು ಮತ್ತು ತೊಂಬತ್ತರ ದಶಕಗಳಲ್ಲಿ ಬಲವಾದ ತಿರುವು ಪಡೆದುಕೊಂಡಿತು. ವಿಶೇಷವಾಗಿ ಈ ಶತಮಾನದ ಯುವ ಕವಿಗಳು ಬಂಗಾಳಿ ಕಾವ್ಯವನ್ನು ಹೊಸ ಎತ್ತರಕ್ಕೆ ಕೊಂಡೊಯ್ದಿದ್ದಾರೆ. ಸಮಕಾಲೀನ ಬಂಗಾಳಿ ಕಾವ್ಯವು ಸಾಹಿತ್ಯದ ಇತರ ಪ್ರಕಾರಗಳಿಗಿಂತ ಹೆಚ್ಚು ಮುಂಚೂಣಿಯ ಸ್ಥಾನದಲ್ಲಿದೆ ಎಂದು ನಾನು ಭಾವಿಸುತ್ತೇನೆ. ಬಾಂಗ್ಲಾದಲ್ಲಿ ನಡೆಯುತ್ತಿರುವ ಸಮಾಜೋ–ರಾಜಕೀಯ ಬದಲಾವಣೆಗಳ ಪರಿಣಾಮವಾಗಿ ಕವಿತೆ ಕಟ್ಟುವ ಶೈಲಿಯಲ್ಲಿ ಅನೇಕ ಬದಲಾವಣೆಗಳಾಗಿವೆ ನಾನು